# ಮನಿಶಾ ನಟನಾಭಿಲಾಷೆ

‘ಬ್ರ್ಯಾಟ್’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟಿರುವ ನಟಿ ಮನಿಶಾ ಕಂದಕೂರ್ ಅವರದ್ದು ತಮ್ಮ ಅಭಿನಯದ ಮೂಲಕ ಪ್ರೇಕ್ಷಕರ ಮನಸ್ಸು ಮುಟ್ಟುವ ಹಂಬಲ.



■ ಸುಮಲತಾ ಎನ್‌.

ಶಶಾಂಕ್ ನಿರ್ದೇಶನದ ‘ಬ್ರ್ಯಾಟ್’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗ ಪ್ರವೇಶಿಸಿರುವ ನಟಿ ಮನಿಶಾ ಕಂದಕೂರ್ ಬೆಂಗಳೂರಿನ ಹುಡುಗಿ. ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಅವರು ಕಾಲೇಜು ಓದುತ್ತಲೇ ಸಿನಿಮಾರಂಗದೆಡೆಗೆ ಆಕರ್ಷಣೆಯನ್ನೂ ಬೆಳೆಸಿಕೊಂಡವರು. ನಟಿಯಾಗಬೇಕೆಂಬ ಕನಸನ್ನು ಪೋಷಿಸಿಕೊಂಡು ಬಂದವರು.

ಬಿಬಿಎ ಓದುತ್ತಾ ನಟನಾ ತರಬೇತಿಯ ವರ್ಕ್‌ಶಾಪ್‌ಗಳಲ್ಲಿಯೂ ತೊಡಗಿಕೊಳ್ಳುತ್ತಿದ್ದ ಅವರಲ್ಲಿ ಸಿನಿಮಾಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ಆಸೆ. ಈ ಆಸೆಯ ಬೆನ್ನತ್ತಿ ಹೈದರಾಬಾದ್‌ನಲ್ಲಿ ತರಬೇತಿ ಪಡೆದ ಅವರಿಗೆ ಸಿನಿಮಾರಂಗಕ್ಕೆ ದಾರಿಯಂತೆ ಕಂಡದ್ದು ಆಡಿಷನ್‌ಗಳು.

ಹೊಸಬರಿಗೆ ಅವಕಾಶದ ಬಾಗಿಲಾಗಿರುವ ಆಡಿಷನ್ ಅನ್ನು ಗಂಭೀರವಾಗಿ ಪರಿಗಣಿಸಿ ಹಲವು ಆಡಿಷನ್‌ಗಳನ್ನು ಎದುರಿಸಿದ್ದ ಮನಿಶಾ ಅವರ ಪ್ರಯತ್ನ ಫಲ ಕೊಟ್ಟಿತ್ತು. ತೆಲುಗು ಸಿನಿಮಾವೊಂದರಲ್ಲಿ ಅಭಿನಯಿಸುವ ಅವಕಾಶ ಎದುರು ಬಂದಿತ್ತು.

‘‘ನಾಲ್ಕೈದು ವರ್ಷಗಳಿಂದಲೂ ಸಿನಿಮಾಗಳಿಗಾಗಿ ಆಡಿಷನ್‌ಗಳನ್ನು ನೀಡುತ್ತಿದ್ದೆ. ಎಲ್ಲೂ ಪಾಸಿಟಿವ್ ಫಲಿತಾಂಶ ಬಂದಿರಲಿಲ್ಲ. ತೆಲುಗು ಭಾಷೆಯಲ್ಲಿಯೂ ಪ್ರಯತ್ನಿಸಿದ್ದೆ. ಅಲ್ಲಿ ಅವಕಾಶ ಸಿಕ್ಕಿತು. ಕನ್ನಡತಿಯಾಗಿರುವ ನನಗೆ ಕನ್ನಡದ ಮೂಲಕವೇ ಸಿನಿಮಾರಂಗ ಪ್ರವೇಶಿಸಬೇಕು ಎನ್ನುವ ಆಸೆಯಿತ್ತು. ಆದರೆ ಕೈಗೂಡಿರಲಿಲ್ಲ. ತೆಲುಗಿನಲ್ಲಿ ‘ಭಲೆ ಉನ್ನಾದಿ’ ಸಿನಿಮಾದಲ್ಲಿ ನಟಿಸಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಬಿಡುಗಡೆಯಾದ ಈ ಸಿನಿಮಾಗೆ ಉತ್ತಮ ಪ್ರತಿಕ್ರಿಯೆ ಬಂದಿದ್ದು ಸಿನಿಮಾರಂಗದ ಬಗ್ಗೆ ಭರವಸೆ ನೀಡಿತು’’ ಎಂದು ಮೆಲುಕು ಹಾಕುತ್ತಾರೆ ಮನಿಶಾ.

ಈ ಹಿಂದೆ ಶಶಾಂಕ್ ಅವರ ಇತರೆ ಸಿನಿಮಾಗಳ ಆಡಿಷನ್‌ನಲ್ಲಿಯೂ ಭಾಗವಹಿಸಿದ್ದ ಮನಿಶಾಗೆ ಕನ್ನಡದಲ್ಲಿ ಅವಕಾಶ ಸಿಕ್ಕದಿದ್ದ ಬಗ್ಗೆ ಬೇಸರ ಇದ್ದರೂ ಭರವಸೆಯಂತೂ ಇತ್ತು. ಅವರ ಭರವಸೆ ಇದೀಗ ‘ಬ್ರ್ಯಾಟ್’ ಮೂಲಕ ನಿಜವಾಗಿದೆ.

ಸದ್ಯ ಈ ಸಿನಿಮಾ ಅವರ ನಟನೆಯ ಎರಡನೇ ಚಿತ್ರವಾಗಿದ್ದು, ಶಶಾಂಕ್ ಹಾಗೂ ನಟ ಡಾರ್ಲಿಂಗ್ ಕೃಷ್ಣ ಅವರೊಂದಿಗೆ ಮೊದಲ ಕನ್ನಡ ಸಿನಿಮಾ ಮಾಡುತ್ತಿರುವುದು ಅವರಲ್ಲಿ ಉತ್ಸಾಹ ತಂದಿದೆ.

‘ಈ ಸಿನಿಮಾಗೆ ನಾನು ತುಂಬಾ ಹೊಂದುತ್ತೇನೆ ಎಂದು ಶಶಾಂಕ್ ಸರ್ ಅವಕಾಶ ನೀಡಿದರು. ಈ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕಿದೆ. ಶಶಾಂಕ್ ಅವರು ಅನುಭವಿ ನಿರ್ದೇಶಕರು. ಅವರು ತುಂಬಾ ವ್ಯವಸ್ಥಿತವಾಗಿ, ಪ್ರೊಫೆಷನಲ್ ಆಗಿ ಕೆಲಸ ಮಾಡುವವರು. ಅವರೊಂದಿಗೆ ಕೆಲಸ ಮಾಡಲು ಅವಕಾಶ ಸಿಕ್ಕಿರುವುದರಿಂದ ತುಂಬಾ ಖುಷಿಯಾಗಿದೆ. ಕ್ಯಾಮೆರಾ ಮುಂದೆ ನಿಂತು ನಟಿಸುವುದನ್ನು ನಾನು ಎಂಜಾಯ್ ಮಾಡುತ್ತೇನೆ’ ಎಂದು ನಗುತ್ತಾರೆ ಮನಿಶಾ.

ಕಲಾವಿದರಿಗೆ ತಮ್ಮಲ್ಲಿನ ಪ್ರತಿಭೆಗೆ ತಕ್ಕುದಾದ, ಅದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವಂಥ ಅವಕಾಶಗಳು ಸಿಗುವುದು ಬಹಳ ಕಷ್ಟ. ಅಂಥದ್ದೊಂದು ಅವಕಾಶ ತಮಗೆ ಸಿಕ್ಕಿದ್ದು, ಈ ಸಿನಿಮಾದಲ್ಲಿ ತಾವು ನಿರ್ವಹಿಸುತ್ತಿರುವ ಹುಡುಗಿಯ ಪಾತ್ರದ ಮುಗ್ಧತೆ ಖಂಡಿತ ಪ್ರೇಕ್ಷಕರನ್ನು ಮುಟ್ಟುತ್ತದೆ ಎಂದು ಭರವಸೆ ವ್ಯಕ್ತಪಡಿಸುತ್ತಾರೆ.

ನಟನೆ ಹೊರತಾಗಿ ಬ್ಯಾಡ್ಮಿಂಟನ್ ಬಹಳ ಇಷ್ಟ ಎನ್ನುವ ಮನಿಶಾಗೆ ಹಾಡು ಕೇಳುವುದು, ನೃತ್ಯ, ಎಲ್ಲಕ್ಕಿಂತ ಹೆಚ್ಚಾಗಿ ಸಿನಿಮಾಗಳನ್ನು ನೋಡುವುದು ಮೆಚ್ಚಿನ ಹವ್ಯಾಸ. ಸದ್ಯ ಸಿನಿಮಾ ಅವಕಾಶಗಳು ಅವರಿಗೆ ಎಡತಾಕುತ್ತಿದ್ದು ಪಾತ್ರಗಳ ಆಯ್ಕೆಯ ಸವಾಲು ಕೂಡ ತಮ್ಮ ಮುಂದಿದೆ ಎನ್ನುತ್ತಾರೆ. ■